G & WC 02/2022
ಪಿ.ಡಬ್ಲ್ಯೂ.3

ದಿನಾಂಕಃ 21.02.2023
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
ಪಾಟೀ ಸವಾಲು ಎದುರುದಾರರ ಪರವಾಗಿ ಶ್ರೀ ಎಂ ಎನ್ ಪಿ ಸಿ, ವಕೀಲರಿಂದ ಃ

2. ಅರ್ಜಿದಾರಳಾದ ಶ್ರೀಮತಿ ಹಣಮಂತಿ ಇವರು ಸಲ್ಲಾದಪೂರದಲ್ಲಿ ವಾಸವಾಗಿರುತ್ತಾರೆ. ನಾನು ಸಹ ಅದೇ ಊರನಲ್ಲಿ ವಾಸವಾಗಿರುತ್ತೇನೆ. ಅರ್ಜಿದಾರಳು ನನಗೆ ಚಿಕ್ಕಮ್ಮ ಆಗಬೇಕು. ಅರ್ಜಿದಾರಳ ಮಗಳ ಹೆಸರು ಗೌರಮ್ಮ ಎಂದು ಇರುತ್ತದೆ. ಗೌರಮ್ಮ ಮದುವೆ ಅಂದಾಜು 9 ವರ್ಷಗಳ ಹಿಂದೆ ಅಗಿರುತ್ತದೆ. ಗೌರಮ್ಮ ಮತ್ತು ಅವಳ ಗಂಡ ಮದುವೆಯಾದ 3-4 ವರ್ಷಗಳ ವರೆಗೆ ಸರಿಯಾಗಿ ಉಳಿದುಕೊಂಡು ಬಂದಿರುತ್ತಾರೆ. ಗೌರಮ್ಮ ಇವರು ಮದುವೆಯಾದ ನಂತರ ಸ್ವಲ್ಪ ದಿವಸ ಗಂಡನ ಮನೆಯಲ್ಲಿ ಮತ್ತು ಸ್ವಲ್ಪ ದಿವಸ ತವರು ಮನೆಯಲ್ಲಿ ಉಳಿಯುತ್ತಿದ್ದರು. ಅರ್ಜಿದಾರಳಿಗೆ 2 ಜನ ಗಂಡು ಮತ್ತು 2 ಜನ ಹೆಣ್ಣು ಮಕ್ಕಳು ಇರುತ್ತಾರೆ. ಅರ್ಜಿದಾರಳ ಗಂಡು ಮಕ್ಕಳು ಬೇರೆ ಬೇರೆ ಆಗಿರುತ್ತಾರೆ. ಅರ್ಜಿದಾರಳು ತಮ್ಮ ಮಕ್ಕಳಿಂದ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ ಎಂದರೆ ಸರಿ. ಅರ್ಜಿದಾರಳಿಗೆ 3-4 ಎಕರೆ ಜಮೀನು ಇರಬಹುದು. ಆ ಮೂರು ನಾಲ್ಕು ಎಕರೆ ಜಮೀನಿನಲ್ಲಿ ಅರ್ಜಿದಾರಳು ಮತ್ತು ಅವರ ಮಕ್ಕಳು ಹಂಚಿಕೊಂಡಿರುತ್ತಾರೆ ಎಂದರೆ ಸರಿ. ಅರ್ಜಿದಾರಳು ತನ್ನ ಜೀವನ ನಿರ್ವಹಣೆಗಾಗಿ ಕೂಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಅರ್ಜಿದಾರಳು ಮತ್ತು ಅವರ ಮಕ್ಕಳು ಸರಿಯಾಗಿ ಇರುತ್ತಾರೆ. ಅರ್ಜಿದಾರಳಿಗೆ ಮತ್ತು ಅವರ ಸೊಸೆಯರ ಮದ್ಯ ಹೊಂದಾಣಿಕೆ ಇರುವುದಿಲ್ಲ ಎಂದರೆ ಸರಿ. ಅರ್ಜಿದಾರಳು ಮತ್ತು ಅವರ ಸೊಸೆಯರ ಮದ್ಯ ಹೊಂದಾಣಿಕೆ ಆಗದ ಕಾರಣ ಅರ್ಜಿದಾರಳು ಮತ್ತು ಅವರ ಮಕ್ಕಳು ಬೇರೆ ಬೇರೆ ಆಗಿ ಉಳಿದಿರುತ್ತಾರೆ ಎಂದರೆ ಸರಿ.

ಎದುರುದಾರನ ಊರು ದರಿಯಾಪುರ್ ಗ್ರಾಮ ಎಂದರೆ ಸರಿ. ದರಿಯಾಪುರ್ ಗ್ರಾಮ ನಮ್ಮ ಊರಿನಿಂದ ಅಂದಾಜು 15 ಕಿ.ಮೀ ದೂರದಲ್ಲಿ ಇರುತ್ತದೆ. ಗೌರಮ್ಮ ಇವಳು 6 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಗೌರಮ್ಮನ ಮಕ್ಕಳ ಹೆಸರಿನಲ್ಲಿ ಹಣವನ್ನು ಎದುರುದಾರ ಮತ್ತು ಅರ್ಜಿದಾರಳು ಸೇರಿ ಇಟ್ಟಿರುತ್ತಾರೆ ಎಂದರೆ ಸರಿ. ಎದುರುದಾರನಿಗೆ 3 ಜನ ಸಹೋದರರು ಇರುತ್ತಾರೆ. ಎದುರುದಾರನ ತಾಯಿ ಜೀವಂತವಾಗಿ ಇರುತ್ತಾಳೆ ಎಂದರೆ ಸರಿ. ಎದುರುದಾರನಿಗೆ 7 ವರ್ಷಗಳ ಹಿಂದೆ ಅಪಘಾತ ಆಗಿರುತ್ತದೆ. ಗೌರಮ್ಮನ ಮಕ್ಕಳ ಹೆಸರನಲ್ಲಿ ಹಣ ಠೇವಣೆ ಇಡುವುದಕ್ಕಿಂತ ಮೊದಲು ಎದುರುದಾರನಿಗೆ ಅಪಘಾತ ಆಗಿತ್ತು ಎಂದರೆ ಸರಿ. ಎದುರುದಾರ ಮತ್ತು ಅವರ ತಾಯಿ ಒಟ್ಟಿಗೆ ವಾಸವಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎದುರುದಾರ ಮತ್ತು ಅವರ ತಾಯಿ ಒಟ್ಟಿಗೆ ವಾಸವಾಗಿರುವುದು ನನಗೆ ಗೊತ್ತಿದ್ದರು ಸಹ ಆ ವಿಷಯ ನನಗೆ ಗೊತ್ತಿಲ್ಲ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಭೀಮಣ್ಣನಿಗೆ ಜಮೀನು ಇರುತ್ತದೆ ಎಂದರೆ ಸರಿ. ಆದರೆ ಎಷ್ಟು

ಎಕರೆ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಎದುರುದಾರ ತನಗೆ ಅಪಘಾತ ಆದ ನಂತರ ಭೀಮರಾಯನ ಗುಡಿಯಲ್ಲಿ ಬೀದರ್ - ಬೆಂಗಳೂರು ರಸೆಯ ಬದಿಯಲ್ಲಿ ಡಿಗ್ರಿ ಕಾಲೇಜು ಎದುರುನಲ್ಲಿ ಕಿರಣಾ ಅಂಗಡಿ ಮತ್ತು ಜನರಲ್ ಸ್ಟೋರ್ ಇಟ್ಟಿರುತ್ತಾರೆ ಎಂದರೆ ಸರಿ. ಗೌರಮ್ಮನ ಮಕ್ಕಳು ಅವರ ಮರಣದ ನಂತರ ಎದುರುದಾರ ಮತ್ತು ಆತನ ತಾಯಿಯ ಬಳಿ ಇರುತ್ತಾರೆ ಎಂದರೆ ಸರಿ. ಎದುರುದಾರ ಮತ್ತು ಅವರ ತಾಯಿ ಎದುರುದಾರನ ಮಕ್ಕಳಿಗೆ ಸರಿಯಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಎದುರುದಾರನ ಮಕ್ಕಳಿಗೆ ಎದುರುದಾರ ಮತ್ತು ಅವರ ತಾಯಿ ಬಟ್ಟೆಬರೆ, ಊಟ ಮತ್ತು ಶಿಕ್ಷಣದ ಖರ್ಚು ಎದುರುದಾರ ಮತ್ತು ಅವರ ತಾಯಿ ನೋಡಿಕೊಳ್ಳುತ್ತಿದ್ದರೆ ಎಂದರೆ ಸರಿಯಲ್ಲ. ಎದುರುದಾರ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಇಸ್ಪೇಟ್ ಆಟ ಆಡುವುದು ಸಾರಾಯಿ ಕುಡಿಯುವುದು ಮಟ್ಕಾ ಆಡುವುದು ಇತ್ಯಾದಿ ದುಶ್ಚಟ್ ಗಳನ್ನು ಹೊಂದಿಲ್ಲ ಎಂದರೆ ಸಾಕ್ಷಿಯು ಎದುರುದಾರನಿಗೆ ದುಶ್ಚಟ್ ಗಳು ಇರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಎದುರುದಾರನಿಗೆ ಅಪಘಾತ ಆದರು ಸಹ ಅವನು ವ್ಯವಹಾರ ಮಾಡಿ ಮತ್ತು ಹೋಲದ ವ್ಯವಹಾರ ನೋಡಿಕೊಂಡು ಆದಾಯ ಗಳಿಸುತ್ತಿದ್ದರೆ ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರಳು ಮತ್ತು ಅವರ ಸಂಬಂಧಿಕರು ಸೇರಿ ಎದುರುದಾರನ ಮಕ್ಕಳ ಹೆಸರಿನಲ್ಲಿ ಇರುವ ಹಣ ಲಪಾಟಯಿಸುವ ಉದ್ದೇಶದಿಂದ ಎದುರುದಾರ ತನ್ನ ಮಕ್ಕಳು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂದು ಹೇಳಿ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಎದುರುದಾರ ತನ್ನ ಮಕ್ಕಳ ಸಂರಕ್ಷಕನ್ನಾಗಲು ಸೂಕ್ತ ವ್ಯಕ್ತಿ ಆಗಿರುತ್ತಾನೆ ಎಂದರೆ ಸರಿಯಲ್ಲ. ಎದುರುದಾರನ ಮಕ್ಕಳು ಎದುರುದಾರನ ಬಳಿ ಇದ್ದರು ಸಹ ಅವರನ್ನು ಅರ್ಜಿದಾರಳ ಮತ್ತು ಅವರ ಸಂಬಂಧಿಕರು ಸೇರಿ ಕೊಂಡು ತಮ್ಮ ಬಳಿ ಕರೆದುಕೊಂಡು ಹೋಗಿ ಎದುರುದಾರನಿಗೆ ತೊಂದರೆ ಕೊಡುತ್ತಿದ್ದರೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.

G & WC 02/2022
ಪಿ.ಡಬ್ಲ್ಯೂ.2

ದಿನಾಂಕಃ 21.02.2023
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
ಪಾಟೀ ಸವಾಲು ಎದುರುದಾರ ಪರವಾಗಿ ಶ್ರೀ ಎಂ ಎನ್ ಪಿ ಸಿ, ವಕೀಲರಿಂದ ಃ

2. ಅರ್ಜಿದಾರಳಾದ ನಮ್ಮ ಪಕ್ಕದ ಮನೆಯವರು ಆಗಿರುತ್ತಾರೆ. ಅರ್ಜಿದಾರಳಿಗೆ 30-40 ಎಕರೆ ಜಮೀನು ಇರುತ್ತದೆ. ಅರ್ಜಿದಾರಳ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಆ ಜಮೀನುಗಳಿಗೆ ಇರುವ ಹೆಸರುಗಳು ನನಗೆ ಗೊತ್ತಿಲ್ಲ. ಆ ಜಮೀನುಗಳು ನಮ್ಮ ಊರಿನ ಸೀಮೆಯಲ್ಲಿ ಇರುತ್ತವೆ. ಅರ್ಜಿದಾರಳಿಗೆ 2 ಜನ ಗಂಡು ಮತ್ತು 2 ಜನ ಹೆಣ್ಣು ಮಕ್ಕಳು ಇರುತ್ತಾರೆ. ಅರ್ಜಿದಾರಳ ಗಂಡು ಮಕ್ಕಳು ಮತ್ತು ಅರ್ಜಿದಾರಳು ಒಟ್ಟಿಗೆ ವಾಸವಾಗಿರುತ್ತಾರೆ. ಎದುರುದಾರನ ಹೆಂಡತಿ ಗೌರಮ್ಮ ಇವರು 5 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ತಯಾರಿಸಲು ಮಾಹಿತಿ ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಎದುರುದಾರನ ಪರಿಚಯ ಇರುತ್ತದೆ. ಆತನ ಊರು ದರಿಯಾಪುರ್ ಇರುತ್ತದೆ. ಎದುರುದಾರನ ಎಷ್ಟು ಜನ ಅಣ್ಣ ತಮ್ಮಂದಿರು ಮತ್ತು ಅಕ್ಕ ತಂಗಿಯರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಎದುರುದಾರನ ತಾಯಿ ಜೀವಂತವಾಗಿ ಇರುತ್ತಾರೆ. ಎದುರುದಾರನ ತಾಯಿ ಎದುರುದಾರನಿಗೆ ಮತ್ತು ಅವನ ಮಕ್ಕಳಿಗೆ ನೋಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ.

ಬೀದರ್ - ಬೆಂಗಳೂರು ರಸೆಯ ಬದಿಯಲ್ಲಿ ಡಿಗ್ರಿ ಕಾಲೇಜು ಎದುರುನಲ್ಲಿ ಕಿರಣಾ ಅಂಗಡಿ ಮತ್ತು ಜನರಲ್ ಸ್ಟೋರ್ ಇಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎದುರುದಾರ ಅಂಗಡಿ ಇಟ್ಟಿರುವ ವಿಷಯ ಗೊತ್ತಿದ್ದರು ಸಹ ಆ ಬಗ್ಗೆ ಗೊತ್ತಿಲ್ಲ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಎದುರುದಾರನಿಗೆ ಜಮೀನು ಇರುತ್ತದೆ. ಆದರೆ ಎಷ್ಟು ಎಕರೆ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಎದುರುದಾರ ತನ್ನ ಮಕ್ಕಳಿಗೆ ನೋಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ಎದುರುದಾರ ತನ್ನ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ನೋಡಿಕೊಳ್ಳುತ್ತಿದ್ದು ಅವರ ಸಂರಕ್ಷಿಕನಾಗಲು ಸೂಕ್ತ ವ್ಯಕ್ತಿ ಆಗಿರುತ್ತಾನೆದರೆ ಸರಿಯಲ್ಲ.

ಎದುರುದಾರ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಇಸ್ಪೇಟ್ ಆಟ ಆಡುವುದು ಸಾರಾಯಿ ಕೂಡಿಯುವುದು ಮಟ್ಕಾ ಆಡುವುದು ಇತ್ಯಾದಿ ದುಶ್ಚಟ್ ಗಳನ್ನು ಹೊಂದಿಲ್ಲ ಎಂದರೆ ಸರಿಯಲ್ಲ. ಎದುರುದಾರ ಸಾರಾಯಿ ಕೂಡಿದು ಎರಡು ಸಲ ನಮ್ಮ ಊರಿಗೆ ಬಂದು ಅರ್ಜಿದಾರಳ ಜೊತೆ ಜಗಳ ಮಾಡಿರುತ್ತಾನೆ ಹಾಗಾಗೀ ಆತ ಕುಡಿಯುವ ಚಟ ಹೊಂದಿರುತ್ತಾನೆ ಎಂದು ನಾನು ಹೇಳುತ್ತೇನೆ. ಎದುರುದಾರನಿಗೆ ಸಾರಾಯಿ ಕುಡಿಯುವ ಚಟ ಇದ್ದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಅರ್ಜಿದಾರಳ ಮಾತು ಈ ಪ್ರಕರಣದಲ್ಲಿ ನಾನು ಎದುರುದಾರನ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.